Downloaded From : http://cbseportal.com/

This question paper consists of 31 questions and 8 printed pages.

Roll No.
ರೋಲ್ ನಂ.

Code No. 58/S/A/K

Set - A

# KANNADA

## ಕನ್ನಡ

## (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ____________

Signature of Invigilators
ಉಸ್ತು ವಾರಿದಾರರ ರುಜು

1. ____________

2. ____________

**ಸಾಮಾನ್ಯ ಸೂಚನೆಗಳು :**

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **58/S/A/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



Downloaded From : http://cbseportal.com/ Courtesy : NIOS

Downloaded From : http://cbseportal.com/

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರಪುಸ್ತಕದಲ್ಲಿ ಬರೆಯಿರಿ.

(2) ಪ್ರಶ್ನೇಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಪ್ರಶ್ನಸಂಖ್ಯೆ 1 ರಿಂದ 11 ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

1 ಮಾಸ್ತಿಯವರು ಮರಣಹೊಂದಿದ ಇಸ್ವಿ. ............ 1

(A) 1891 (B) 1986

(C) 1886 (D) 1906

2 ತೊತ್ತ ತೊಡಕುಗಳನ್ನು ................ 1

(A) ಬಿರಿವೆ (B) ಮರೆವೆ

(C) ತೊರೆವೆ (D) ಕೊರೆವೆ

3 ಓಟುರುಕ ಎಂದರೆ .................... 1

(A) ಓತಿಕ್ಯಾತ (B) ಕಾಡುಕೋಳಿ

(C) ಕೆಸರಿನ ಆಮೆ (D) ಅಳಿಲು

4 ಕ್ಷೌರ - ಈ ಪದದ ತದ್ಭವ ................... 1

(A) ಚೋರ (B) ಪೋರ

(C) ಪೌರ (D) ಚೌರ

5 ನಂಬೆಣ್ಣಗ ಒಲದಾನ ಶಿವ .................. 1

(A) ಬೇಡೋ (B) ನೋಡೋ

(C) ಕಾಡೋ (D) ಓಡೋ

6 ಶಾಲುಸಾಬಿ ನಮ್ಮ ಊರಿನ .................. 1

(A) ಅವತಾರ (B) ನರಸಿಂಹಾವತಾರ

(C) ಧರ್ಮಾವತಾರ (D) ಮಾನವಾವತಾರ

7 ಕ್ಷಯರೋಗಕ್ಕೆ ................... ತಿಂಗಳು ಔಷಧಿ ಸೇವಿಸಬೇಕು 1

(A) 20 ತಿಂಗಳು (B) 10 ತಿಂಗಳು

(C) 5 ತಿಂಗಳು (D) 18 ತಿಂಗಳು



Downloaded From : http://cbseportal.com/ Courtesy : NIOS

Downloaded From : http://cbseportal.com/

8 ಕೋಳಿಯು ಇದನ್ನು ಕಂಡರೆ ಕೂಗಿ ಕುಲವೆಲ್ಲವನ್ನು ಕರೆಯುವುದು. 1

(A) ಅಗುಳ (B) ಕುಟುಕ

(C) ಅನ್ನ (D) ಕೀಟ

9 ನೀಲೇಗೌಡನ ತಂದೆಯ ಹೆಸರು ................ 1

(A) ಚೋಳರಾಜ (B) ಬಿಲ್ಲಯ್ಯ

(C) ಚೋಳಪತಿ (D) ಜಂಜೇಗೌಡ

10 ದೇವರಲ್ಲಿ ನಂಬಿಕೆ ಇಲ್ಲದವನು .............. 1

(A) ಆಸ್ತಿಕ (B) ನಾಸ್ತಿಕ

(C) ಸ್ವಸ್ತಿಕ (D) ಮಾಸ್ತಿಕ

11 ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ .................. 1

(A) ಮೋಹ (B) ಕೋಹ

(C) ದೇಹ (D) ಸ್ವಾಹ

12 ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ :

ವಿದ್ಯೆ ಎಂಬುದು ಪ್ರಾರಂಭದಲ್ಲಿ ಜ್ಞಾನ ಸಂಪಾದನೆಗೆ ಸೀಮಿತವಾಗಿತ್ತು. ಅನಂತರ ವಿದ್ಯೆಯ ಪರಿಭಾಷೆ ವಿಸ್ತಾರವಾಗುತ್ತ ಇಂದು ವಿದ್ಯೆ "ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ" ಎಂದು ವ್ಯಾಖ್ಯಾನಗೊಳ್ಳುತ್ತಿದೆ. ಇದು ವಿದ್ಯೆಯ ಮುಖ್ಯ ಗುರಿಯೂ ಆಗಿದೆ. ಇದರ ಉದ್ದೇಶ ವಿದ್ಯಾರ್ಥಿಯು ಪರಿಪೂರ್ಣ ಜ್ಞಾನಗಳಿಸಬೇಕು ಎಂಬುದಾಗಿದೆ.

ಪ್ರಾಚೀನ ಭಾರತದಲ್ಲಿ ವಿದ್ಯೆಗೆ ಪ್ರಮುಖ ಸ್ಥಾನ ನೀಡಲಾಗಿತ್ತು. ಅಂದಿನ ಸಮಾಜಕ್ಕೆ ಜ್ಞಾನಗಂಗೆಯನ್ನು ಹರಿಸಿದ ತಕ್ಷಶಿಲಾ, ನಳಂದಾ ವಿಶ್ವವಿದ್ಯಾಲಯಗಳು ಇಂದಿಗೂ ತಮ್ಮ ಹೆಸರನ್ನು ಉಳಿಸಿಕೊಂಡಿವೆ. ಈ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಸಕಲ ವಿದ್ಯೆಗಳಲ್ಲು ಪಾರಂಗತರಾಗಿ ಬರುತ್ತಿದ್ದರು. ಹಾಗೆಯೇ ಹಿಂದೆ ರಾಜ ಮನೆತನದವರು ಅರವತ್ನಾಲ್ಕು ವಿದ್ಯೆಗಳಲ್ಲಿ ಪರಿಣತರಾಗಿರುತ್ತಿದ್ದರಂತೆ. ಇಂದೂ ಸಹ ವಿದ್ಯಾಭ್ಯಾಸ ಪ್ರಕಾರಗಳು ಬಗೆಬಗೆಯಾಗಿ ಹಿಗ್ಗುತ್ತಾಸಾಗಿವೆ.

ಯಾವಾಗ ವಿದ್ಯೆಯನ್ನು ಉದ್ಯೊಗ ಪಡೆಯಲು ಕಲಿಯಲಾರಂಭಿಸಿದರೋ ಅಂದಿನಿಂದ ಅದರ ಗುರಿ ಹಾಗೂ ಮೌಲ್ಯಗಳು ಕುಂಠಿತಗೊಳ್ಳುತ್ತಾ ಸಾಗುತ್ತಿವೆ. ಹಾಗೂ ಅದರ ಅವಶ್ಯಕತೆ ಹೆಚ್ಚುತ್ತಿದೆ. ಇತ್ತೀಚೆಗೆ ಕೇವಲ ವಿದ್ಯೆಯನ್ನುಗಳಿಸಿದರೆ ಸಾಲದು ಅದಕ್ಕೆ ತರಬೇತಿಯೂ ಬೇಕೆನಿಸುತ್ತದೆ. ಏಕೆಂದರೆ ವಿದ್ಯೆ ಜ್ಞಾನಕೊಟ್ಟರೆ ತರಬೇತಿ-ಪರಿಣತಿಯನ್ನು ನಿಡುತ್ತದೆ. ಇದರಿಂದ ಕುಶಲತೆ, ಯೋಗ್ಯತೆ, ಒಳನೋಟ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಪಡೆಯಬಹುದು.

ವಿದ್ಯೆಯ ಮುಖ್ಯ ಕೆಲಸವೆಂದರೆ ಪ್ರಯೋಜನಕರವಾದ, ಬುದ್ಧಿವಂತಿಕೆಯ, ರಾಜನಿಷ್ಠೆಯ ಭಾವೋದ್ವೇಗಕ್ಕೆ ತುತ್ತಾಗದ, ಪ್ರಬಲವಾದ ನೈತಿಕ ಶಕ್ತಿ ಪಡೆಯುವ, ಸುಸಂಸ್ಕೃತಿಯನ್ನು ಮತ್ತು ವೈಜ್ಞಾನಿಕ ಚಿಂತನೆಯನ್ನು ಮೈಗೂಡಿಸಿಕೊಳ್ಳುವ ಆರೋಗ್ಯಪೂರ್ಣ ಪ್ರಜೆಗಳನ್ನು ರೂಪಿಸುವುದೇ ಆಗಿದೆ.

ಆದುದರಿಂದ ಇಂದಿನ ವಿದ್ಯಾರ್ಥಿಗಳು ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯೆಯನ್ನು ಅರ್ಥೈಸಿಕೊಂಡು ಆರೋಗ್ಯಪೂರ್ಣ ಪ್ರಜೇಗಳಾಗಬೇಕು.



Downloaded From : http://cbseportal.com/ Courtesy : NIOS

Downloaded From : http://cbseportal.com/

ಪ್ರಶ್ನೆಗಳು ಃ

(1) ರಾಜ ಮನೆತನದವರು .................. ವಿದ್ಯೆಗಳಲ್ಲಿ ಪರಿಣತರು. 1

(A) ಹತ್ತು (B) ಅರವತ್ತೇಳು

(C) ಅರವತ್ನಾಲ್ಕು (D) ಇಪ್ಪತ್ತೈದು

(2) ಪ್ರಾರಂಭದಲ್ಲಿ ವಿದ್ಯೆ ................ ಸಂಪಾದನೆಗೆ ಸೀಮಿತವಾಗಿತ್ತು. 1

(A) ಹಣ (B) ಆಸ್ತಿ

(C) ಹೊಲ (D) ಜ್ಞಾನ

(3) ವಿದ್ಯೆಯ ವ್ಯಾಖ್ಯಾನವೇನು ? 1

(4) ಯಾವ ವಿಶ್ವವಿದ್ಯಾಲಯಗಳು ಇಂದಿಗೂ ಹೆಸರನ್ನು ಉಳಿಸಿಕೊಂಡಿವೆ ಹೇಗೆ ? 2

(5) ಗುರಿ ಹಾಗೂ ಮೌಲ್ಯಗಳು ಹೇಗೆ ಕುಂಠಿತಗೊಳ್ಳುತ್ತಾ ಸಾಗುತ್ತಿವೆ ? 2

(6) ವಿದ್ಯಾಭ್ಯಾಸದ ಪ್ರಕಾರಗಳು ಹೇಗೆ ಹಿಗ್ಗುತ್ತಾ ಸಾಗಿವೆ ? 1

(7) ವಿದ್ಯೆ ಮತ್ತು ತರಬೇತಿ - ಏನನ್ನು ನೀಡುತ್ತವೆ ? ಇದರಿಂದ ಯಾವ ಲಾಭ ವಿದ್ಯಾರ್ಥಿಗಳಿಗೆ ಸಿಗುತ್ತದೆ ? 2

(8) ವಿದ್ಯೆಯ ಮುಖ್ಯ ಕೆಲಸವೇನು ? 2

(9) ಇಂದಿನ ವಿದ್ಯಾರ್ಥಿಗಳು ಎಂಥಹ ಪ್ರಜೆಗಳಾಗಬೇಕು ? 1

13 ಕೊಟ್ಟಿರುವ ಪದ್ಯವನ್ನು ಓದಿರಿ. ಕೆಳಗೆ ಕೊಟ್ಟಿರುವ ಪ್ರಶ್ನಗಳಿಗೆ ಉತ್ತರಿಸಿರಿ :

ನದಿ ಹರಿದಿತ್ತು, ಬನ ನಿಂತಿತ್ತು
ಬಾನ್ ನೀಲಿಯ ನಗೆ ಬೀರಿತ್ತು
ನಿರ್ಜನ ದೇಶದ ನೀರವ ಕಾಲಕೆ-
ಖಗರವ ಪುಲಕಂ ತೋರಿತ್ತು
    ಸೃಷ್ಟಿಯ ರಚನೆಯ ಕುಶಲಕೆ - ಚಂದಕೆ
    ಜಗದಚ್ಚರಿಯಂದದ ಒಪ್ಪಂದಕೆ
    ಚಿರಚೇತನ ತಾನಿಹೆನೆಂಬಂದದಿ
    ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು !

- ಕುವೆಂಪು

(1) ಬಾನ್ ಯಾವ ನಗೆ ಬೀರಿತ್ತು ? 1

(A) ಕೆಂಪು (B) ಹಸಿರು

(C) ನೀಲಿ (D) ಕಪ್ಪು

(2) 'ನಿರ್ಜನ ದೇಶದ ನೀರವ ಕಾಲಕೆ' 1

ನಿರ್ಜನ, ದೇಶ - ಇವುಗಳ ವಿರುದ್ಧ ಪದ ಬರೆಯಿರಿ



Downloaded From : http://cbseportal.com/ Courtesy : NIOS

Downloaded From : http://cbseportal.com/

(3) 'ನದಿ ಹರಿದಿತ್ತು, ಬನ ನಿಂತಿತ್ತು' 2

- ನದಿಗಳ ಉಪಯೋಗ ಕುರಿತು, ಒಂದೆರಡು ವಾಕ್ಯಗಳಲ್ಲಿ ಬರೆಯಿರಿ.

(4) 'ದೇವರು ರುಜು ಮಾಡಿದನು' 2

- ದೇವರನ್ನು ನಾವು ಹೇಗೆ ನಂಬುವುದು ?

ಒಂದೆರಡು ಮಾತುಗಳಲ್ಲಿ ಬರೆಯಿರಿ.

**14** 'ಚರಕ' ಬಡಕೂಲಿ ಹೆಣ್ಣುಮಕ್ಕಳಪಾಲಿಗೆ ಏನು ? 1

**15** ಲೇಖಕರು ಯಾರನ್ನು ನತದೃಷ್ಟರು ಎಂದಿರುವರು ? 1

**16** ಶಿಸ್ತಿನ ಸಿಪಾಯಿಗಳು ಎಷ್ಟು ಗಂಟೆಗೆ ಏಳುತ್ತಾರೆ ? 1

**17** ಗರತಿ - ಎದ್ದು ಯಾರನ್ನು ನೆನೆಯುತ್ತಾಳೆ ? 1

**18** (a) ಕಥಾನಾಯಕನಿಗೆ ಇಂಗ್ಲೆಂಡಗೆ ಹೋಗಿ ಏನಾಗಬೇಕೆಂಬ ಆಸೆ ? 1

(b) ಶಾಂತಿ, ಕಥಾನಾಯಕ, ಖಳನಾಯಕ, ವಿಜಯ - ಇಲ್ಲಿ ಗುಂಪಿಗೆ ಸೇರದ - ಪದ. 1

**19** ಕೆಳಗಿನವುಗಳಿಗೆ ಉತ್ತರಿಸಿರಿ :

(a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : 2

(1) ತಿಳಿದಿರಲಿಲ್ಲ

(2) ಸರಿಯಲ್ಲ

(3) ಅರ್ಥವಿಲ್ಲದ

ಅಥವಾ

(a) 'ವಂತ' ಪ್ರತ್ಯಯ ಸೇರಿಸಿ 2 ಶಬ್ದ ಮಾಡಿರಿ. 2

(b) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : 2

(1) ಹಿರಿದಾದ + ಜೇನು

(2) ಕಿಡಿದಾದ + ಅಡವಿ

(3) ತಲೆಯಲ್ಲಿ + ನೋವು

ಅಥವಾ

(b) 'ಗಳು' ಪ್ರತ್ಯಯ ಸೇರಿಸಿ ಎರಡು ಬಹುವಚನ ಪದಗಳನ್ನು ರಚಿಸಿರಿ. 2



Downloaded From : http://cbseportal.com/ Courtesy : NIOS

Downloaded From : http://cbseportal.com/

(c) ಕೆಳಗೆ ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ - ಬರೆಯಿರಿ : 2

(1) ಸುಖ

(2) ಅಗತ್ಯ

(3) ಭಯ

ಅಥವಾ

(c) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ : 2

(1) ಚಿನ್ನ ಬಹಳ ಬೆಲೆಬಾಳುವಂಥಹ ವಸ್ತು.

(2) ಬಡತನ ಸಿರಿತನ ಜೀವನದಲ್ಲಿ ಇದ್ದದ್ದೇ.

20 ಕೆಳಗೆ ಕೊಟ್ಟಿರುವ ನುಡಿ ಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ : 2

(1) ಗಾನಕೋಗಿಲೆ

(2) ನಾಟ್ಯಮಯೂರಿ

(3) ಕಂಠಸಿರಿ

21 'ಚಿನ್ಮಯ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22 ಕಂಪ್ಯೂಟರ್ ಅಂಕಣಕಟ್ಟೆಯಿಂದ ಮಣಿಕಟ್ಟಿಗೆ ಹೇಗೆ ಬಂತು ? 4

23 ಕವಿಯ ಜನಗಳು ಮಹಡಿ ಮನೆಗಳನ್ನು ಎಷ್ಟೊಂದು ಕಷ್ಟದಿಂದ ಕಟ್ಟುತ್ತಾರೆ ಎಂಬುದನ್ನು ವಿವರಿಸಿರಿ. 5

24 ದೀರ್ಘಯಾತ್ರೆಗೆಂದು ಹುಯೆನ್-ತ್ಸಾಂಗ್ ಟಾಂಗ್ ಮನೆತನದ ರಾಜನಲ್ಲಿ ಪರವಾನಿಗೆ ಕೇಳಿದಾಗ ರಾಜನ ಪ್ರತಿಕ್ರಿಯೆ ಎನಾಗಿತ್ತು ? 5

ಅಥವಾ

ರಾವಣನ ಹೃದಯ ವೈಶಾಲ್ಯತೇಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. 5

25 ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡೂ ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ : 2+2=4

(a) ಓಡೋಡಿ

(b) ಕೊರಗುತ್ತಾ - ಮರುಗುತ್ತಾ

(c) ಸನ್ನೆ - ಸಂಕೇತ



Downloaded From : http://cbseportal.com/ Courtesy : NIOS

Downloaded From : http://cbseportal.com/

26 ಕ್ರೀಡಾ ವಿಶ್ವವಿದ್ಯಾಲಯ ಶಿವಾಜಿನಗರ ಅಮರಾವತಿ - ಒಟ್ಟು ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ತೋರಿಸುವ ಸರಳ ಸ್ತಂಭ (ದಂಡ) ಚಿತ್ರವನ್ನು ರಚಿಸಿರಿ : 5

| ವರ್ಷ : | 2005 | 2006 | 2007 | 2008 | 2009 | 2010 | 2011 | 2012 | 2013 | 2014 |
|---|---|---|---|---|---|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ : | 150 | 200 | 205 | 410 | 475 | 550 | 600 | 651 | 710 | 750 |

ಅಥವಾ

ನೀವು ಪರಶುರಾಮ ತಂದೆ ಶನ್ನಪ್ಪ, ಊರು ಬಾದಾಮಿ, ಬಿ.ಎಸ್.ಸಿ. ಪದವೀಧರರು ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ಭರ್ತಿಮಾಡಿರಿ : 5

ಗೆ,
ವೈಧ್ಯಾಧಿಕಾರಿಗಳು
ಆರೋಗ್ಯಇಲಾಖೆ
ಬೆಂಗಳೂರು.

ಉದ್ಯೋಗದ ಹೆಸರು - ಕಿರಿಯ ಆರೋಗ್ಯ ಸಹಾಯಕ
ಪ್ರ.ನಂ.ದಿ. - ಆರ್.ಪಿ. 8/16-18, ದಿನಾಂಕ 9/9/2010

ಹೆಸರು : ..............................................
ತಂದೆ : ..............................................
ಜನ್ಮಸ್ಥಳ : ..............................................
ಹುಟ್ಟಿದ ದಿನಾಂಕ : ..............................................
ಪೂರ್ಣವಿಳಾಸ : ..............................................
ರಾಷ್ಟ್ರೀಯತೆ : ..............................................
ಮತ / ಜಾತಿ : ..............................................
ವಿದ್ಯಾರ್ಹತೆ : ..............................................
ಅನುಭವ : ..............................................
ಓದಿದ ಶಾಲೆಯಿಂದ ದೃಢಿಕರಣ ಪತ್ರ : ..............................................
ಬ್ಯಾಂಕ್ / ಅಂಚೆಕಚೇರಿಯ ಹೆಸರು : ..............................................
ಖರೀದಿಸಿದ ಡಿ.ಡಿ. / ಪಿ.ಓ.ನಂ. : ..............................................

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೆನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳು ನಿಜ ಎಂದು ಪ್ರಮಾಣಿಕರಿಸುತ್ತೇನೆ.

ಧನ್ಯವಾದಗಳು

ತಮ್ಮ ನಂಬುಗೆಯ
ಹಸ್ತಾಕ್ಷರ
(ಹೆಸರು)



Downloaded From : http://cbseportal.com/ Courtesy : NIOS

Downloaded From : http://cbseportal.com/

27 ಮರಿದುಂಬಿ ಅಥವಾ ಕೋಗಿಲೆಯಾಗಿ ಹುಟ್ಟುವುದು ಒಳ್ಳೆಯದು ಎಂದು ಕವಿ ಪಂಪ ಆಸೆಪಡುವುದೇಕೆ ? ವಿವರಿಸಿರಿ. 5

28 ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(1) ಕನ್ನಡ ಸಾಹಿತ ಪರಷತ್ತು ಬೆಂಗಳುರನಲ್ಲದಿ.
**(ಶುದ್ಧರೂಪದಲ್ಲಿ ಬರೆಯಿರಿ)**

(2) ಮಹಾಭಾರತದಲ್ಲಿ ಏಕಲವ್ಯನ ಪಾತ್ರ ಶ್ರೇಷ್ಠ ಎಂಬುದನ್ನು ಮರೆಯುತ್ತೇವೆ : ಶ್ರೇಷ್ಠ ಇದರ ವಿರುದ್ಧ ಪದ ...........

(3) ಬಾಬಾ:ಇದು ದ್ವಿರುಕ್ತಿ ಪದ :: ತಂದೆ-ತಾಯಿ ...................

(4) ದೇವರಾಜ ಮನೆಯಲ್ಲಿ ಅಭ್ಯಾಸ ಮಾಡುತ್ತಿದ್ದಾನೆ ..................
**(ಭೂತಕಾಲಕ್ಕೆ ಪರಿವರ್ತಿಸಿರಿ)**

(5) ಅಬ್ಬಾ ತಾಜಮಹಲ ಎಷ್ಟೊಂದು ಸುಂದರವಾಗಿದೆ
**(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)**

29 ನೀವು ದೀಪಕರಾಜ / ಸಂಗೀತರಾಣಿ ವಾರು - ಹಲಸಂಗಿ, ಜಿಲ್ಲೆ, ಗದಗ, ಎಂದು ತಿಳಿದುಕೊಂಡು, ನಿಮ್ಮ ಊರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಅಭಯಂತರರಿಗೆ ಒಂದು ಪತ್ರ ಬರೆಯಿರಿ. 7

ಅಥವಾ

ಬ್ರಹ್ಮಕುಮಾರಿ, ಈಶ್ವರಿ ಮಹಾಧ್ಯಾನಕೇಂದ್ರದಲ್ಲಿ ಯೋಗಭ್ಯಾಸ ಪರಿಕ್ಷಣ ಪಡೆಯುತ್ತಿರುವ ಜ್ಯೋತಿ/ಪ್ರಕಾಶ ಎಂದು ಅರ್ಥೈಸಿಕೊಂಡು, ವಿನಾಯಕನಗರ 2ನೇ ಕ್ರಾಸ್, ಭಾಗಲಕೋಟನಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆ ಯೋಗಾಭ್ಯಾಸದ ವಿವರಣೆಯನ್ನು ತಿಳಿಸುತ್ತಾ ಒಂದು ಪತ್ರ ಬರೆಯಿರಿ.

30 ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು **50** ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(1) ಮನಸ್ಸಿದ್ದರೆ ಮಾರ್ಗ

(2) ಕೋಪವೆಂಬುದು ಅನರ್ಥ ಸಾಧನ

(3) ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ.

31 ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ : 10

(1) ಸಮೂಹ ಮಾಧ್ಯಮಗಳು

(2) ವಿಜ್ಞಾನ ವರವೋ ಶಾಪವೋ ?

(3) ಗ್ರಂಥಾಲಯ



Downloaded From : http://cbseportal.com/ Courtesy : NIOS